ತಾರೀಖು 17ನೇ ಏಪ್ರೆಲ್ 1895ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಇದರಡಿ ನಮೂದಿಸಿರುವ ಚವ್ಕುಬೀನೆ ಮತ್ತು ಬೊಂಬು ಶಿವಮೊಗ್ಗಾ ಡಿಸ್ಟ್ರಿಕ್ಟ್ ಡಿಪೋಗಳಲ್ಲಿ ಅವುಗಳ ಬಾಜೂದಲ್ಲಿ ಕಾಣುವ ತಾರೀಖುಗಳಲ್ಲಿ ಫಾರೆಸ್ಟ್ ಆಫಿಸರ್ ಮತ್ತು ಡೆಪ್ಯುಟಿ ಕಮ್ಮಿಷನರ್ ಯಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರ್‌ಗಳಿಂದ ಹರಾಜು ಮಾಡಿಸಲ್ಪಡುವದು.

ನಂಬರ್.	ಡಿಪೋ ಹೆಸರು.	ಹರಾಜು ತಾರೀಖು.	ಸಾಗುವಾನಿ ನಾಟಾ.	ಕಾಡುಜಾತಿ ನಾಟಾ.	ಸಾಗುವಾನಿ ಬೆಲಗು ಮತ್ತು ತುಂಡು.	ಕಾಡುಜಾತಿ ಬೆಲಗು.	ಬೊಂಬು.	ಪರಾ.
1	ಆನವಟ್ಟಿ ..	1—5—1895	20	..	100	100	200	ಶಿವಮೊಗ್ಗಾ ಜಿಲ್ಲೆ.
2	ಶಿರಾಳಕೊಪ್ಪ ..	4—5—1895	10	120	120	50	200	
3	ಶಿಕಾರಿಪುರ ..	7—5—1895	10	150	150	..	4,000	
4	ಚನ್ನಗಿರಿ ..	10—5—1895	..	..	200	..	8,000	
5	ಪುಬ್ಬಾಣಿ ..	13—5—1895	..	..	500	200	10,000	
6	ಅಯನೂರು ..	31—5—1895	80	70	800	..	5,000	
7	ಶಿವಮೊಗ್ಗಾ ..	6—6—1895	50	100	500	100	8,000	
8	ಕಣಬೂರು ..	10—6—1895	50	150	500	..	..	
9	ಸಮುದ್ರಹಳ್ಳಿ ..	11—6—1895	50	150	500	..	..	
10	ಜೋಳ್ಳೆಡೆಹಳ್ಳಿ ..	12—6—1895	..	..	500	..	..	

ಹರಾಜ್ ಪರತ್ತುಗಳು—ಸ್ಯ 1895ನೇ ಇಸವಿ 15ನೇ ಮಾರ್ಚಿ 15229—ಆರ್. ಎಫ್. 155–92ನೇ ನಂಬರ್ ಗವರ್ಮೆಂಟ್ ಇಸ್ತಿಹಾರಿನಲ್ಲಿ ಫಾಯಿಷ್ ಮಾಡಲ್ಪಟ್ಟಿರತಕ್ಕ ರೂಲ್ಸ್ ನೋಡಿಕೊಳ್ಳತಕ್ಕದ್ದು.

ಯಲ್. ರಿಕ್ಕೆಟ್ಸ್,
ಇನ್‌ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ಬೆಂಗಳೂರು ಡಿಸ್ಟ್ರಿಕ್ಟ್.

ಮೋಜಣಿ ಖರ್ಚು ಮೊಬಲಗು 338—7—2.

ಮಾಗಡಿ ತಾಲ್ಲೂಕು ಈಚೇರಿಯಿಂದ.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ ನ ಪ್ರಸಿದ್ಧ ಪತ್ರಿಕೆ.

1ನೇ ಮೋಜಣಿ ಖರ್ಚಿನ ಕಂದಾಯದ ಬಾಕೀದಾರರಾದ ಬವರಿಂಗ್‌ಪೇಟೆ ತಾಲ್ಲೂಕು ತಿಮ್ಮಸಂದ್ರ ಗ್ರಾಮದ ಕಾನುಭೋಗ ವೆಂಗಟರಮಣಯ್ಯನ ಮಕ್ಕಳು ಗುಂಡಪ್ಪನವರಿಂದ ಬರಬೇಕಾದ ಜಮಿರ್ಾ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಬೆಂಗಳೂರು ಡಿಸ್ಟ್ರಿಕ್ಟ್ ಮಾಗಡಿ ತಾಲ್ಲೂಕು ತಾವರೆಕೆರೆ ಹೋಬಳಿ ಕಾಯಂಗುತ್ತಾ ಯಲಚಗುಪ್ಪೆ ಗ್ರಾಮದಲ್ಲಿ 1895ನೇ ಮೇ 14ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಈ ಹರಾಜು 22—5—95ನೇ ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1894–95ನೇ ಸಾಲಿಗೆ ಪೂರ್ತಿಯಾಗಿ 338—7–2 ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಶೀಲ್ ನೇರಿಗೆ 338—7—2 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಕೇಕಡಾ 25ನ್ನು ಡಿಪಾಜಿಟ್ ಹಾಜರ್ ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋಬಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂತಾ ಡಿಫಾಜಿಟ್ ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟ್ ಯಾ ಮುಖ್ತಾರೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನು ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುಖ್ತಾರೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂತಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪರ್ಯಂತ್ಯಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜು ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜ್ ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರನು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ಸೈ ಮೊಹರ್ ಮಾಡಲ್ಪಟ್ಟ ಬಂದು ಹರಾಜ್ ಸರಟಿ ಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಲಿತ್ಯಗಳಿಗೆ ಗವರ್ಮೆಂಟಿನವರು ಜವಾಬ್ದಾರರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ನ್ಯಾಯದೆಯಲ್ಲಿ ಗವರ್ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂತಾ ಅಪ್ಪೀಲಿನಲ್ಲಿ ಆಗುವ ಫೈನಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು. ಹರಾಜು ಮೊಬಲಗು ಭಡಸವಾಲಿದಾರನು ಪೂರಾಕೊಟ್ಟಮಾತ್ರದಿಂದಲೇ ಆಬ್ಜೆರ್ ಸವಾಲನ್ನು ಮಂಜೂರ್ಮಾಡಲು ಗವರ್ಮೆಂಟಿನವರು ಬದ್ಧರಾಗಿರುವದಿಲ್ಲ.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರನ ಹೆಸರು.	ಸ್ವತ್ತಿನ ತಪ್ಪೀಲು. ಕಟ್ಟಡಗಳು. ಕಟ್ಟಡದ ಹೆಸರು.	ಕಟ್ಟಡಗಳು. ಅಂದಾಜು ಕಿಮ್ಮತ್ತು.	ಜಮೀನು. ನಂಬರ್ ಆಫೀನಾ ಜಮೀನಿನ ಹೆಸರು.	ಜಮೀನು. ಖುಷ್ಕೀ ತರೀ ಬಾಗಾಯಿತು ಹಾಗೂ ಹಾಳೂ ಆಫೀನಾ ಬಾಗಾಯತು.	ವಿಸ್ತೀರ್ಣ. ಎ.	ವಿಸ್ತೀರ್ಣ. ಗು.	ಅಕ್ಕಾರು. ರೂ.	ಅಕ್ಕಾರು. ಆ.	ಅಕ್ಕಾರು. ಪೈ.	ಸರಕಾರಕ್ಕೆ ಬರಬೇಕಾದ ಸೈಟ್ ರೆಂಟ್ ಸಮೇತ ಪೂರಾ ಕಂದಾಯದ ಬಾಬತು ಮೊಬಲಗು. ರೂ.	ಆ.	ಪೈ.
1	2	3	4	5	6	7	8	9		10			11		
					ರೂ.ಆ.ಪೈ			ಎ.	ಗು.	ರೂ.	ಆ.	ಪೈ.	ರೂ.	ಆ.	ಪೈ.
ಮೈಸೂರು.	ತಾವರೆಕೆರೆ.	ಕಾಯಂಗುತ್ತಾ ಯಲಚನಹಳ್ಳಿ.	ಬವರಿಂಗೌಡಪ ತಾಲ್ಲೂಕು ತಿಪ್ಪನಹಳ್ಳಿ ಜಾನಪ್ಪೋ ಗರು ವೆಂಕಟಪುರವಮಣಿಯ್ಯನವರ ನ್ಯಕ್ಕ ಗುಂಜಪ್ಪನವರು	..		ಕಾಯಂಗುತ್ತಾ ಯಲಚನಹಳ್ಳಿ ಗ್ರಾಮ ಸರ್ವೆ	ಖುಷ್ಕೀ ತರೀ ಬಾಗಾಯಿತು ಪಟ್ಟು ಈ ಗ್ರಾಮಕ್ಕೆ ಸಾಲಿಯಾನಾ ಸರ್ಕಾರಕ್ಕೆ ಬರತಕ್ಕದ್ದು. ಖರ್ಜೋಡಿ ಚಿಲ್ಲರೆ ಇನಾಂ ಸೆಸ್ ಜೋಡಿ ಬಗೆ ಚಿಲ್ಲರೆ ಇನಾಂ ತಿಗೆ ಸೆಸ್ಸು ಪಟ್ಟು	301 30 6 339 0 0 0 0	25 36 28 9 0 0 0 0	625 391 3 24 1 420	8 0 6 7 12 9	0 0 0 0 6 6	338	7	2

ಮೋಜಣಿ ಖರ್ಚು ಮೊಬಲಗು

* ಯಾ ಬಾಕೀ ಇರುವ ಮೆಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಈ ಹರಾಜನ್ನು 1894—95ನೇ ಇಸವಿ ಕಂದಾಯವನ್ನು ಕೊಡುವ ಪರ್ಯಂತ್ಯದ ಮೇಲೆ ಕೂಗಿಸಲ್ಪಡುತ್ತೆ.

ಯಂ. ಅಣ್ಣಾಜಿರಾವ್,
ಫಾರ್ ಡೆಪ್ಯುಟಿ ಕಮ್ಮಿಷನರ್.